ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಉಲ್ಲೇಖಿತ ಸ್ಥಳದಲ್ಲಿ ವಿದ್ಯಾರ್ಥಿನಿಲಯ ಪ್ರಾರಂಭಿಸಲು ಬೇಡಿಕೆ ಬಂದಿದ್ದು, ಅನುದಾನದ ಲಭ್ಯತೆ ಹಾಗೂ ಇತರೆ ಅಂಶಗಳ ಮೇರೆಗೆ ಪರಿಶೀಲಿಸಲಾಗುವುದು.

ಇ) ಈ ವಿಷಯವು ಕಾರ್ಮಿಕ ಇಲಾಖೆಗೆ ಸಂಬಂಧಿಸಿರುವುದರಿಂದ, ಆ ಇಲಾಖೆ ಒದಗಿಸಿದ ಮಾಹಿತಿಯಂತೆ, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವುದು ಸರ್ಕಾರದ ನೀತಿಯಾಗಿದ್ದು, ಈ ನೀತಿಯನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯಿದೆ 2008ರ ಅಡಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ರಚಿಸಲಾಗಿದೆ. ಪ್ರಥಮ ಹಂತದಲ್ಲಿ ದರ್ಜಿಗಳು, ದೋಬಿ, ಹಮಾಲರು, ಆಟೋ ಮತ್ತು ಟ್ಯಾಕ್ಸಿ ಚಾಲಕರು, ಹೋಟೆಲ್ ಕಾರ್ಮಿಕರು, ಇವರನ್ನು ಸಾಮಾಜಿಕ ಭದ್ರತಾ ಯೋಜನೆ ಅಡಿ ತರಲು ಉದ್ದೇಶಿಸಲಾಗಿದೆ. ಈ ದಿಸೆಯಲ್ಲಿ ಯೋಜನೆ ರೂಪಿಸುವ ಸಲುವಾಗಿ ವಿಶೇಷ ಸಮಿತಿ ರಚಿಸಲಾಗಿದ್ದು, ಸಮಿತಿಯು ಈ ಮೇಲೆ ನಮೂದಿಸಿರುವ ಕ್ಷೇತ್ರಗಳ ಕಾರ್ಮಿಕರು ಹಾಗೂ ಮಾಲೀಕರುಗಳ ಜೊತೆ ಚರ್ಚಿಸಿದ ನಂತರ ಕೆಲವು ಅಂಶಗಳನ್ನೊಳಗೊಂಡ ಕರಡನ್ನು ಸಿದ್ದಪಡಿಸಿದೆ.

ಶಾದಿಮಹಲ್ ನಿರ್ಮಾಣ

458 (952) : ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು) : ಮಾನ್ಯ ಹಜ್, ವಕ್ಫ್ & ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಶಾದಿಮಹಲ್ ನಿರ್ಮಾಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇಲ್ಲದಿದ್ದಲ್ಲಿ, ಎಷ್ಟು ಹಣ ಬಿಡುಗಡೆಯಾಗಿದೆ, ಎಷ್ಟು ಖರ್ಚಾಗಿದೆ ಹಾಗೂ ಕೆಲಸ ಯಾವ ಹಂತದಲ್ಲಿದೆ;

ಇ) ಶಾದಿಮಹಲ್ ಪೂರ್ತಿಯಾಗಲು ಎಷ್ಟು ಹಣ ಬೇಕಾಗಬಹುದು, ಆರ್ಥಿಕ ಮೂಲಗಳು ಯಾವುವು?

ಪೂ: ಡಾ.ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ & ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಹೌದು.

ಆ) ಗೌರಿಬಿದನೂರು ತಾಲ್ಲೂಕಿನಲ್ಲಿ ಶಾದಿಮಹಲ್/ಸಮುದಾಯ ಭವನಗಳಿಗೆ ಬಿಡುಗಡೆಯಾದ, ಖರ್ಚಾದ ಅನುದಾನದ ವಿವರ ಹಾಗೂ ಕಾಮಗಾರಿ ಹಂತದ ವಿವರವನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಇ) ಗೌರಿಬಿದನೂರು ತಾಲ್ಲೂಕಿನಲ್ಲಿ ಶಾದಿಮಹಲ್/ಸುಮದಾಯ ಭವನ ಪೂರ್ಣಗೊಳ್ಳಲು ಬೇಕಾಗಬಹುದಾದ ಅನುದಾನ ವಿವರ ಹಾಗೂ ಆರ್ಥಿಕ ಮೂಲಗಳ ವಿವರವನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ.

ಅನುಬಂಧ–1

ಶ್ರೀ ಶಿವಶಂಕರ ರೆಡ್ಡಿ.ಎನ್.ಹೆಚ್(ಗೌರಿಬಿದನೂರು) ವಿಧಾನ ಸಭಾ ಸದಸ್ಯರ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 952ಕ್ಕೆ ಅನುಬಂಧ–1

ಗೌರಿಬಿದನೂರು ತಾಲ್ಲೂಕಿನಲ್ಲಿ ಶಾದಿಮಹಲ್/ಸಮುದಾಯಭವನ ಕಟ್ಟಡ ನಿರ್ಮಾಣಕ್ಕೆ ಬಿಡುಗಡೆಯಾದ, ಖರ್ಚಾದ ಅನುದಾನದ ವಿವರ ಹಾಗೂ ಕಾಮಗಾರಿಯ ವಿವರ

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಸಂಸ್ಥೆಯ ಹೆಸರು	ಮಂಜೂರಾದ ಅನುದಾನ	ಬಿಡುಗಡೆಯಾದ ಅನುದಾನ	ಕಾಮಗಾರಿಯ ಹಂತ
1	ಬೈತುಲ್ ಮಾಲ್ ಅಂಡ್ ಮದರಸಾ ಇ ಅಲೇ ಅರೇಬಿಯಾ ಅನ್ವರ್ ಅಲ್ಲಾ ಬಖೀಯತ್ ಕಮ್ಮಿಟಿ, ಗೌರಿಬಿದನೂರು	10.00	7.50	ಅಡಿಪಾಯದ ಕೆಲಸ ಮುಗಿದಿದ್ದು, ಕಾಲಂಗಳ ಕೆಲಸ ಪ್ರಗತಿಯಲ್ಲಿದೆ
2	ದಾರುಜ್ ಜೊಹರಾ ಸೋಷಿಯಲ್ ಅಂಡ್ ವೆಲ್ ಫೇರ್	18.00	18.00	ಕಾಮಗಾರಿಯು ಪೂರ್ಣ ಗೊಂಡಿರುವುದು

	ಟ್ರಸ್ಟ್ (ರಿ), ಅಲಿಪುರ,			
3	ಅಂಜುಮನ್ ಇ ಅಹ್ಲೆ ಸುನ್ನತುಲ್ಲಾ ಜಮಾತ್ ಜಾಮಿಯಾ ಮಸೀದಿ, ದಾರಿನಾಯಕನಪಾಳ್ಯ	20.00	10.00	ನೆಲಮಹಡಿಯ ಆರ್.ಸಿ.ಸಿ ಮುಗಿದಿದ್ದು, ಮೊದಲ ಮಹಡಿ ಮೇಲ್ಛಾವಣಿ ಹಂತದ ಕೆಲಸ ಪ್ರಗತಿಯಲ್ಲಿದೆ.

ಅನುಬಂಧ–2

ಶ್ರೀ ಶಿವಶಂಕರ ರೆಡ್ಡಿ.ಎನ್.ಹೆಚ್(ಗೌರಿಬಿದನೂರು) ವಿಧಾನ ಸಭಾ ಸದಸ್ಯರ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 952ಕ್ಕೆ ಅನುಬಂಧ–2

ಗೌರಿಬಿದನೂರು ತಾಲ್ಲೂಕಿನಲ್ಲಿ ಶಾದಿಮಹಲ್/ಸಮುದಾಯಭವನ ಕಟ್ಟಡ ನಿರ್ಮಾಣಕ್ಕೆ ಬೇಕಾದ ಬಹುದಾದ ಅನುದಾನದ ವಿವರ ಹಾಗೂ ಆರ್ಥಿಕ ಮೂಲಗಳ ವಿವರ

ಕ್ರ ಸಂ.	ಸಂಸ್ಥೆಯ ಹೆಸರು	ಆರ್ಥಿಕ ಮೂಲಗಳ ವಿವರ
1	ಬೈತುಲ್ ಮಾಲ್ ಅಂಡ್ ಮದರಸಾ ಇ ಅಲೇ ಅರೇಬಿಯಾ ಅನ್ವರ್ ಅಲ್ಲಾ ಬಖೀಯತ್ ಕಮಿಟಿ, ಗೌರಿಬಿದನೂರು	ಸದರಿ ಕಟ್ಟಡದ ಅಂದಾಜು ವೆಚ್ಚವು ರೂ. 59.82 ಲಕ್ಷಗಳಿದ್ದು, ಸರ್ಕಾರದಿಂದ ಗರಿಷ್ಟ ರೂ.20.00 ಲಕ್ಷಗಳನ್ನು ಬಿಡುಗಡೆ ಮಾಡಲು ಅವಕಾಶವಿರುತ್ತದೆ. ಉಳಿದ ಅನುದಾನವನ್ನು ಸಂಸ್ಥೆಯವರು ದಾನಿಗಳು, ಚಂದಾದಾರರು ಹಾಗೂ ವಕ್ಫ್ ಕೌನ್ಸಿಲ್‌ನಿಂದ ಹಾಗೂ ಇತರೆಯವರಿಂದ ಪಡೆಯುವುದಾಗಿ ಸಂಸ್ಥೆಯವರು ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತಾರೆ.

2	ದಾರುಜ್ ಜೊಹರಾ ಸೋಷಿಯಲ್ ಅಂಡ್ ವೆಲ್ ಫೇರ್ ಟ್ರಸ್ಟ್ (ರಿ), ಅಲಿಪುರ,	ಕಾಮಗಾರಿಯು ಪೂರ್ಣಗೊಂಡಿರುವುದು
3	ಅಂಜುಮನ್ ಇ ಅಹ್ಲೆ ಸುನ್ನತುಲ್ಲಾ ಜಮಾತ್ ಜಾಮಿಯಾ ಮಸೀದಿ, ದಾರಿನಾಯಕನಪಾಳ್ಯ	ಸದರಿ ಕಟ್ಟಡದ ಅಂದಾಜು ವೆಚ್ಚವು ರೂ.65.00 ಲಕ್ಷಗಳಿದ್ದು, ಸರ್ಕಾರದಿಂದ ಗರಿಷ್ಟ ರೂ.20.00 ಲಕ್ಷಗಳನ್ನು ಬಿಡುಗಡೆ ಮಾಡಲು ಅವಕಾಶವಿರುತ್ತದೆ. ಉಳಿದ ಅನುದಾನವನ್ನು ದಾನಿಗಳು, ಸಾರ್ವಜನಿಕರು, ಚಂದಾದಾರರು ಹಾಗೂ ದೇಣಿಗೆ ಮುಖಾಂತರ ಪಡೆಯುವುದಾಗಿ ಸಂಸ್ಥೆಯವರು ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತಾರೆ.

ತೇರದಾಳು ಮತಕ್ಷೇತ್ರದಲ್ಲಿಯ ಆಸ್ಪತ್ರೆಯಲ್ಲಿಯ ವೈದ್ಯರ ತಾಂತ್ರಿಕ ಸಿಬ್ಬಂದಿ ಕೊರತೆ

459 (936) ಶ್ರೀ ಸಿದ್ದು ಸವದಿ (ತೇರದಾಳ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೇರದಾಳ ಮತ ಕ್ಷೇತ್ರದಲ್ಲಿರುವ ಒಟ್ಟು ಆಸ್ಪತ್ರೆಗಳ ಸಂಖ್ಯೆ ಎಷ್ಟು; ಅವು ಯಾವುವು;

ಆ) ಈ ಆಸ್ಪತ್ರೆಗಳಲ್ಲಿರುವ ಸಿಬ್ಬಂದಿಯ ಕೊರತೆಗಳೆಷ್ಟು; ಯಾವಾಗ ಸರಿಪಡಿಸುವಿರಿ;

ಇ) ಇಲ್ಲವಾದಲ್ಲಿ ಉತ್ತಮ ಚಿಕಿತ್ಸೆ ಇಲ್ಲದೆ, ರೋಗಿಗಳು ಪರದಾಡುತ್ತಿದ್ದಾರೆ ಅವರುಗಳಿಗೆ ಯಾವ ರೀತಿ ಚಿಕಿತ್ಸೆ ಕೊಡಿಸುವಿರಿ;

ಈ) ಗುತ್ತಿಗೆ ಆಧಾರದಲ್ಲಿಯಾದರೂ ವೈದ್ಯರನ್ನು ಆಯ್ಕೆ ಮಾಡುವ ಆಲೋಚನೆ ಇದೆಯೇ, ಇಲ್ಲದಿದ್ದಲ್ಲಿ ಪರಿಹಾರವೇನು?